# ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ವಿತರಿಸಲು ಕ್ರಮ ಕೈಗೊಳ್ಳಲು ಮನವಿ




ಬಳ್ಳಾರಿ ಮಾ : ಎ ಐ ಕೆ ಕೆ ಎಂ ಎಸ್ ರೈತ ಸಂಘಟನೆ ವತಿಯಿಂದ ಬಗರ್ ಹುಕುಂ ಸಾಗುವಳಿ ದಾರರಿಗೆ ಹಕ್ಕು ಪತ್ರ ವಿತರಿಸಲು ಕೋರಿ ಇತ್ತೀಚೆಗೆ ಭೂ ಮಂಜೂರಾತಿ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ತಿಮ್ಮನಗೌಡ ಅವರಿಗೆ ಮನವಿ ಸಲ್ಲಿಸಲಾಯಿತು.

ಬಳ್ಳಾರಿ ತಾಲೂಕಿನಲ್ಲಿ ಸುಮಾರು 40 ರಿಂದ 50 ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ತಮ್ಮ ಜೀವನ ಸಾಗಿಸುವುದಕ್ಕಾಗಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಬಗರ್ ಹುಕುಂ ಸಾಗುವಳಿದಾರರಿಗೆ ಸರ್ಕಾರ ಹಕ್ಕು ಪತ್ರ ನೀಡುವುದಾಗಿ ಭರವಸೆ ನೀಡಿ, ಅವರಿಂದ ಅರ್ಜಿಗಳನ್ನು ಸ್ವೀಕಸಿ ಸುಮಾರು ವರ್ಷಗಳೇ ಕಳೆದಿವೆ, ಆದರೆ ಈ ಕಾರ್ಯ ಆಮೆಗತಿಯಲ್ಲಿ ಸಾಗುತ್ತಿರುವುದು ಕೆಲವೊಮ್ಮೆ, ಸ್ಥಗಿತಗೊಂಡಿರುವುದರಿಂದ, ಈ ಭೂಮಿಯ ಮೇಲೆ ಅವಲಂಬಿತವಾಗಿರುವ ಸಾಕಳ್ಟು ರೈತ ಕುಟುಂಬಗಳು ಸಂಕಳ್ಟಕ್ಕೆ ಸಿಲುಕುವಂತಾಗಿದೆ. ಈ ರೈತರು ತಮ್ಮ ಜೀವನ ಸಾಗಿಸಲು ಬೇರೆ ಯಾವುದೇ ಭೂಮಿಯು ಇವರಿಗೆ ಇಲ್ಲವಾಗಿದೆ, ಈಗ ಇರುವ ಭೂಮಿಗೆ ಹಕ್ಕು ಪತ್ರ ಇಲ್ಲದ್ದರಿಂದ ಇವರಿಗೆ ಯಾವುದೇ ರೀತಿಯ ಸರ್ಕಾರಿ ಸೌಲಭ್ಯಗಳು ಮತ್ತು ಬ್ಯಾಂಕ್ ಸೌಲಭ್ಯಗಳು ಸಿಗದಂತಾಗಿವೆ. ಹಾಗಾಗಿ ಈ ಕೂಡಲೇ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ವಿತರಿಸಲು ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿದರು.ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಗೋವಿಂದ್ , ಉಪಾಧ್ಯಕ್ಷ ಈರಣ್ಣ, ಜಿಲ್ಲಾ ಕಾರ್ಯದರ್ಶಿ ಗುರಳ್ಳಿ ರಾಜ, ಜಿಲ್ಲಾ ಸಮಿತಿ ಸದಸ್ಯರಾದ ಲಿಂಗಪ್ಪ, ಮಲ್ಲಪ್ಪ, ದಸ್ತಗಿರಿ, ಬಸವರಾಜ್, ಮಾರೆಪ್ಪ, ರಮೇಶ್, ಧನರಾಜ್, ನಾಯ್ಕಪ್ಪ, ಮಲ್ಲಿಕಾರ್ಜುನ ಸೇರಿದಂತೆ ಇತರರು ಇದ್ದರು.

### ಡಾ. ಗಡ್ಡಿ ದಿವಾಕರ್ ಅವರ "ಮೌನ ಮಿಡಿದ ಮಾತು" ಎಂಬ ಪ್ರಥಮ ಕವನ ಸಂಕಲದ ಕೃತಿ ಲೋಕಾರ್ಪಣೆ

# ಏಕ ವ್ಯಕ್ತಿ ನಟನೆಯ "ಕೌದಿ" ನಾಟಕ ಪ್ರದರ್ಶನ



ಬಳ್ಳಾರಿ ಮಾ : ಬಳ್ಳಾರಿ ನಗರದ ವಿಮ್ಸ್ ವೈದ್ಯರ ಭವನದಲ್ಲಿ ವಿಮ್ಸ್ ಕನ್ನಡ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಳತ್ತು ಜಿಲ್ಲಾ ಘಟಕದಿಂದ ಡಾ. ಗಡ್ಡಿ ದಿವಾಕರ್ ಅವರ "ಮೌನ ಮಿಡಿದ ಮಾತು" ಎಂಬ ಪ್ರಥಮ ಕವನ ಸಂಕಲದ ಕೃತಿ ಲೋಕಾರ್ಪಣೆ ಮತ್ತು ಪತ್ರಕರ್ತ ಗಣೇಶ ಆಮೀನನಗಡವರ ಏಕ ವ್ಯಕ್ತಿ ನಟನೆಯ "ಕೌದಿ" ನಾಟಕ ಪ್ರದರ್ಶನ ನಡೆಯಿತು.ಕನ್ನಡ ಸಾಹಿತ್ಯ ಪರಿಳತ್ ಜಿಲ್ಲಾ ಅಧ್ಯಕ್ಷ ಡಾ. ನಿಷ್ಠಿ ರುದ್ರಪ್ಪ ಕೃತಿ ಬಿಡುಗಡೆ ಮಾಡಿದರು. ಡಾ ಗುಡಿ ಕೃತಿ ಕುರಿತು ಮಾತನಾಡಿದರು. ಈ ಕಾರ್ಯಕ್ರಮಕ್ಕೆ ವಿಮ್ಸ್ ನಿರ್ದೇಶಕ ಡಾ. ಗಂಗಾಧರ ಗೌಡ ಅಧ್ಯಕ್ಷತೆ ವಹಿಸಿದ್ದರು. ಡಾ. ಪರಸಪ್ಪ ಬಂದ್ರಕಳ್ಳಿ, ಡಾ. ಕೆ ಶಿವಲಿಂಗಪ್ಪ ಹಂದಿಹಾಳು, ಕಸಾಪ ಗ್ರಾಮೀಣ ಘಟಕದ ಅಧ್ಯಕ್ಷ ಎ ಯರ್ರಿಸ್ವಾಮಿ ವೇದಿಕೆಯಲ್ಲಿದ್ದರು.

# ಹುಬ್ಬಳ್ಳಿ ಜನ್ಮ ಭೂಮಿಯಾಗಿದೆ ಬೆಳಗಾವಿ ನನ್ನ ಕರ್ಮಭೂಮಿಯಾಗಿ ಸ್ವೀಕರಿಸುತ್ತೇನೆ



ಬೆಳಗಾವಿ: ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬೆಳಗಾವಿ ಎಲ್ಲ ನಾಯಕ ಜೊತೆ ಮಾತನಾಡಿದ್ದು, ಒಟ್ಟಾಗಿ ಚುನಾವಣೆ ಮಾಡೋಣ ಎಂದಿದ್ದಾರೆ. ಬುಧವಾರ(ಮಾ.27)ದಿಂದ ಬೆಳಗಾವಿಯಲ್ಲಿ ಪ್ರಚಾರ ಆರಂಭಿಸುತ್ತೇನೆ ಎಂದರು. ಅಲ್ಲಿರುವ ಎಲ್ಲ ನಾಯಕ ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆಯು ಎದುರಿಸಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ತಿಳಿಸಿದರು

ಕಾಂಗ್ರೆಸ್ ಅಭ್ಯರ್ಥಿ ಯುವಕನೆಂಬ ಕಾರಣ ಹಗುರವಾಗಿ ಪರಿಗಣಿಸಲ್ಲ. ಅಲ್ಲಿ ಜಾತಿಯು ಕೆಲಸ ಮಾಡಲ್ಲ. ಈ ಚುನಾವಣೆ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದು, ಎಲ್ಲ ವರ್ಗದ ಜನರ ವಿಶ್ವಾಸಕ್ಕೆ ತೆಗೆದುಕೊಂಡು ನಾನು ಗೆಲ್ಲತ್ತೇನೆ ಎಂದು ತಿಳಿಸಿದರು.

ನರೇಂದ್ರ ಮೋದಿ ಅವರು ಮತ್ತೆ ಪ್ರಧಾನಿಯಾಗಬೇಕು ಎಂಬುವುದು ನನ್ನ ಇಚ್ಛೆಯಾಗಿದೆ. ನನಗೆ ಟಿಕೆಟ್ ದೊರೆಕಿದ್ದಕ್ಕಾಗಿ ಸಂಸದೆ ಮಂಗಳಾ ಅಂಗಡಿ ಕುಟುಂಬಸ್ಥರು ತುಂಬಾ ಸಂತೋಷ ವ್ಯಕ್ತಪಡಿಸಿದ್ದಾರೆ. ಅವರು ನಮ್ಮ ಪರವಾಗಿ ಪ್ರಚಾರ ಮಾಡಲಿದ್ದಾರೆ. ಇನ್ನೂ ರಮೇಶ ಜಾರಕಿಹೊಳಿ ನರಂತರ ಸಂಪರ್ಕದಲ್ಲಿದ್ದು ನಮಗೆ ಬೆಂಬಲ ನೀಡುತ್ತಾರೆ ಎಂದು ಹೇಳಿದರು.

ಗಾಲಿ ಜನಾರ್ಧನ ರೆಡ್ಡಿ ಬಿಜೆಪಿ ಸೇರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಜನಾರ್ಧನ ರೆಡ್ಡಿ ಅವರು ಪಕ್ಷದ ಅಸ್ತಿತ್ವ ಇಲ್ಲದ ಸಂದರ್ಭದಲ್ಲಿ ಸಂಘಟನೆ ಮಾಡಿದ್ದಾರೆ. ಅಷ್ಟೇ ಅಲ್ಲದೇ ಬಿಜೆಪಿ ಸಲುವಾಗಿ ಕೆಲಸ ಮಾಡಿದ್ದಾರೆ. ಜನಾರ್ಧನ ರೆಡ್ಡಿ ಅಷ್ಟೇ ಅಲ್ಲದೇ ಸಾಕಷ್ಟು ಜನ ಬಿಜೆಪಿ ಬರಲಿದ್ದಾರೆ ಎಂದರು

# "ಮನದ ಮಾತು" ಮುಕ್ತ ಮಾತುಕತೆ, ಸಂವಾದ

ಬೆಳಗಾವಿ : ಪ್ರತಿ ಯುಗಾದಿ, ದೀಪಾವಳಿ ಹಬ್ಬಗಳಿಗೆ ಸೀರೆ, ಹೊಸ ಬಟ್ಟೆ ಖರೀದಿಸಿ ತೊಟ್ಟು ಸಂಭ್ರಮಿಸುತ್ತೀರಿ. ಈ ಬಾರಿ ಹಬ್ಬದ ಜೊತೆಗೆ ಒಂದು ಪುಸ್ತಕ ಕೊಂಡು, ಓದುವ ಹವ್ಯಾಸ ಬೆಳೆಸಿಕೊಳ್ಳುವಂತೆ ಮಹಿಳೆಯರಿಗೆ ರಾಜ್ಯಸಭಾ ಸದಸ್ಯೆ, ಲೇಖಕಿ ಸುಧಾಮೂರ್ತಿ ಕರೆ ನೀಡಿದರು.

ಬೆಳಗಾವಿ ನಗರದ ಸಪ್ನ ಬುಕ್‌ಹೌಸ್ ಸಭಾಂಗಣದಲ್ಲಿ ಇಂದು ಭಾನುವಾರ ಹಮ್ಮಿಕೊಂಡಿದ್ದ ಸುಧಾಮೂರ್ತಿ ಅವರೊಂದಿಗೆ "ಮನದ ಮಾತು" ಮುಕ್ತ ಮಾತುಕತೆ, ಸಂವಾದ ಮತ್ತು ಸಲ್ಲಾಪ ಕಾರ್ಯಕ್ರಮದಲ್ಲಿ ಅವರು ಭಾಗಿಯಾಗಿ ಮಾತನಾಡಿದರು. ಕನ್ನಡಿಗರು ಮತ್ತು ಮರಾಠಿ ಮಹಿಳೆಯರು ಪುಸ್ತಕ ಕೊಂಡುಕೊಳ್ಳಿ. ನನ್ನದೇ ಪುಸ್ತಕ ಖರೀದಿಸಿ ಅಂತಾ ನಾನು ಕೇಳಿಕೊಳ್ಳೋದಿಲ್ಲ. ಯಾವುದೇ ಪುಸ್ತಕ ಕೊಂಡು ಓದಲು ಮನಸ್ಸು ಮಾಡಿ ಎಂದು ಕಿವಿಮಾತು ಹೇಳಿದರು. ಮನೆಯಲ್ಲಿ ಬೆಲೆ ಬಾಳುವ ಚಿನ್ನಾಭರಣ, ಸೀರೆ ಸೇರಿ ಮತ್ತಿತರ ವಸ್ತುಗಳನ್ನು ಸಂಗ್ರಹಿಸಿಟ್ಟರೆ ಕಳ್ಳರು ಬಂದು ದೋಚಿಕೊಂಡು ಹೋಗಬಹುದು. ಆದರೆ, ಪುಸ್ತಕಗಳು ಇದ್ದರೆ ಯಾರೂ ಕದ್ದೊಯ್ಯುವುದಿಲ್ಲ ಎಂದರು.

ಇಡೀ ಕರ್ನಾಟಕವೇ ನನಗೆ ಪ್ರೀತಿ. ಅದರಲ್ಲೂ ಉತ್ತರ ಕರ್ನಾಟಕದ ಮೇಲೆ ನನಗೆ ವಿಶೇಷ ಪ್ರೀತಿ. ಉತ್ತರಕರ್ನಾಟಕದ ಮಧ್ಯಮವರ್ಗದ ಕುಟುಂಬದಲ್ಲಿ ಜನಸಿದ ನನಗೆ ಈ ಪದವಿ, ಗೌರವ ಸಿಕ್ಕಿದ್ದು ನಮ್ಮೆಲ್ಲರ ಪ್ರೇಮದಿಂದ. ನನಗೆ ಸಾಹಿತಿ ಅಂತಾ ಕರೆಸಿಕೊಳ್ಳಲು ತುಂಬಾ ಹೆಮ್ಮೆ ಎನಸುತ್ತದೆ. ಶ್ರೀಮಂತ ಉದ್ಯಮಿ ನಾರಾಯಣಮೂರ್ತಿ ಪತ್ನಿ ಅಂತಾ ಕರೆಸಿಕೊಳ್ಳುವುದಕ್ಕಿಂತ ಲೇಖಕಿ ಎನಿಸಿಕೊಳ್ಳಲು ನನಗೆ ತುಂಬಾ ಹೆಮ್ಮೆ ಎನಸುತ್ತದೆ ಎಂದು ಹೇಳಿದರು.

ಪುಸ್ತಕ ಹೃದಯದಿಂದ ಹುಟ್ಟುತ್ತದೆ. ಬರವಣಿಗೆ ಸೃಜನಾತ್ಮಕ ಕಲೆ. ಹೃದಯದಲ್ಲಿ ಹುಟ್ಟುವ ಮೂಲ ಭಾವನೆ ಕನ್ನಡ. ಹಾಗಾಗಿ, ನಾನು ಮೊದಲು ಬರೆಯೋದು ಕನ್ನಡದಲ್ಲೆ. ಆಮೇಲೆ ಇಂಗ್ಲಿಷ್??ನಲ್ಲಿ ನಾನೇ ಟ್ರಾನ್ಸ್??ಲೇಟ್? ಮಾಡುತ್ತೇನೆ. ಕರಾಚಿ, ಲಂಡನ್, ದಕ್ಷಿಣ ಆಫ್ರಿಕಾ, ಅಮೆರಿಕಾದಲ್ಲೂ ನನ್ನ ಪುಸ್ತಕಗಳನ್ನು ನೋಡಿದ್ದೇನೆ. ನಾನು ಅದ್ಭುತ ಅಲ್ಲ. ನನ್ನ ಕನ್ನಡ ಭಾಷೆ ಅದ್ಭುತ ಎಂದು ಸುಧಾ ಮೂರ್ತಿ ಅಭಿಪ್ರಾಯಪಟ್ಟರು.

ಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡಲು ದುಡ್ಡು ಅಷ್ಟೇ ಬೇಕಿಲ್ಲ. ಒಳ್ಳೆಯ ಮನಸ್ಸು, ಸಹೃದಯ ಇರಬೇಕು. ಯಾರಿಗೆ ಸಹೃದಯವಿದೆ. ಕಷ್ಟವನ್ನು ನೋಡಿ ಮನಸ್ಸು ತಡೆದುಕೊಳ್ಳುವುದಿಲ್ಲವೋ ಅಂಥವರು ಮಾತ್ರ ಸಹಾಯ ಮಾಡುತ್ತಾರೆ. ನಿತ್ಯ ತೃಪ್ತರಾದರೆ ಮಾತ್ರ ಮನಸ್ಸಿಗೆ ಶಾಂತಿ ಸಿಗುತ್ತದೆ. ಯಾರನ್ನೂ ಮೆಚ್ಚಿಸದೇ ನಮ್ಮ ಕೆಲಸ ನೀವು ಮಾಡುತ್ತಿರಬೇಕು ಎಂದು ಸುಧಾಮೂರ್ತಿ ಹೇಳಿದರು.

ಪತ್ರಕರ್ತ ವಿಶ್ವೇಶ್ವರ ಭಟ್ ಮಾತನಾಡಿ, ಸುಧಾಮೂರ್ತಿ ತಮ್ಮ ಸರಳ, ಸಜ್ಜನಿಕೆ ವ್ಯಕ್ತಿತ್ವದ ಮೂಲಕ ಎಲ್ಲರನ್ನು ಬೆರಗುಗೊಳಿಸಿದ್ದಾರೆ. ಇನ್ಫೋಸಿಸ್ ಫೌಂಡೇಷನ್ ಮೂಲಕ ಸಮಾಜಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಿದ್ದಾರೆ. ಒಂದು ಸರ್ಕಾರ ಮಾಡಬೇಕಿದ್ದ ಕೆಲಸವನ್ನು ಅವರು ಮಾಡುತ್ತಿರುವುದು ಶ್ಲಾಘನೀಯ. ಅಲ್ಲದೇ ಸುಧಾಮೂರ್ತಿ ರಚಿಸಿದ 46 ಕೃತಿಗಳು ಭಾರತದಲ್ಲಿ ಹಲವು ಭಾಷೆಗಳಿಗೆ ಅನುವಾದಗೊಂಡಿವೆ. ಕವನ ಹೊರತುಪಡಿಸಿ, ಎಲ್ಲ ಪ್ರಕಾರಗಳ ಸಾಹಿತ್ಯವನ್ನು ರಚನೆ ಮಾಡಿರೋದು ಅವರ ಹೆಗ್ಗಳಿಕೆ ಎಂದರು.

ಬಳಿಕ ತಮ್ಮ ವೈಯಕ್ತಿಕ ಮತ್ತು ವೃತ್ತಿ ಬದುಕು, ಸಾಹಿತ್ಯ ಕುರಿತು ಸಾರ್ವಜನಿಕರ ವಿವಿಧ ಪ್ರಶ್ನೆಗಳಿಗೆ ಸುಧಾ ಮೂರ್ತಿ ಉತ್ತರಿಸಿದರು. ಈ ವೇಳೆ ಸಪ್ನ ಬುಕ್‌ಹೌಸ್ ಕನ್ನಡ ವಿಭಾಗದ ಮುಖ್ಯಸ್ಥ ಆರ್. ದೊಡ್ಡೇಗೌಡ, ಬೆಳಗಾವಿ ಶಾಖೆ ವ್ಯವಸ್ಥಾಪಕ ರಘು ಎಂ. ವಿ ಸೇರಿ ಮತ್ತಿತರರು ಇದ್ದರು.



ಯರಗಟ್ಟಿ: ಹೋಳಿ ಹಬ್ಬದ ಅಂಗವಾಗಿ ಪಟ್ಟಣದಲ್ಲಿ ಮಾಜಿ ಜಿ. ಪಂ. ಸದಸ್ಯ ಅಜೀತಕುಮಾರ ದೇಸಾಯಿ ಕಾರ್ಯಕರ್ತರೊಂದಿಗೆ ಪರಸ್ಪರ ಬಣ್ಣ ಹಚ್ಚುವ ಮೂಲಕ ಹೋಳಿ ಹಬ್ಬವನ್ನು ಆಚರಿಸಲಾಯಿತು. ಈ ಸಂದ 'ರ್ಭದಲ್ಲಿ ಚೇತನ ಜಕಾತಿ, ಈರಣ್ಣಾ ಹುಲ್ಲೂರ, ಶ್ರೀಕಾಂತ ಉಜ್ಜನಕೊಪ್ಪ, ಉದಯ ಕಡಕೋಳ, ಗದಿಗೆಪ್ಪ ಗಲಬಿ, ತಮ್ಮಣ್ಣಾ ಕಾಮಣ್ಣವರ, ಮಹಾಂತೇಶ ಜಕಾತಿ, ಚಂದ್ರಶೇಖರ ಹಾದಿಮನಿ, ಶಿವಾನಂದ ಯರಗಣವಿ, ಮೋಹನ ಹಾದಿಮನಿ, ರಾಜಶೇಖರ ಬಿರಾದಾರ, ರಾಜೇಂದ್ರ ವಾಲಿ ಸೇರಿದಂತೆ ಅನೇಕ ಇದ್ದರು.

# ಕ್ಷಯರೋಗ ವಿರುದ್ಧದ ಹೋರಾಟದಲ್ಲಿ ವಿಶ್ರಾಂತಿಯಿಲ್ಲದೆ ಮುನ್ನಡೆಯೋಣ: ಜಿಪಂ ಸಿಇಓ ರಾಹುಲ್ ಶರಣಪ್ಪ ಸಂಕನೂರ



ಬಳ್ಳಾರಿ,ಮಾ.: .ಜಗತ್ತಿನ ಹಲವು ದೇಶಗಳು ಸೇರಿದಂತೆ ಭಾರತದಲ್ಲೂ ಕ್ಷಯರೋಗ ಪ್ರಕರಣಗಳು ಇಂದಿಗೂ ಕಂಡು ಬರುತ್ತಿದ್ದು, ವೈದ್ಯರ ಸಲಹೆಯಂತೆ ಎರಡು ವಾರಕ್ಕಿಂತ ಹೆಚ್ಚು ದಿನಗಳ ಕೆಮ್ಮು ಇರುವವರು ತಪ್ಪದೇ ಪರೀಕ್ಷೆ ಮಾಡಿಸುವ ಮೂಲಕ ಬಳ್ಳಾರಿ ಜಿಲ್ಲೆಯನ್ನು ಕ್ಷಯ ಮುಕ್ತ ಮಾಡುವುದಕ್ಕೆ ಎಲ್ಲರೂ ವಿಶ್ರಾಂತಿ ಪಡೆಯದೇ ಶ್ರಮಿಸಬೇಕಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ಆರೋಗ್ಯ ತರಬೇತಿ ಕೇಂದ್ರ ಇವರ ಆಶ್ರಯದಲ್ಲಿ ಸೌಖ್ಯಬೆಳಕು, ನಿತ್ಯ ಜೀವನ, ವಿಮುಕ್ತಿ ಇವರ ಸಹಕಾರದೊಂದಿಗೆ 'ವಿಶ್ವ ಕ್ಷಯ ರೋಗ ದಿನಾಚರಣೆಯ ಹಿನ್ನೆಲೆಯಲ್ಲಿ, ಹೌದು! ನಾವು ಕ್ಷೇಮವನ್ನು ಕೊನೆಗೊಳಿಸಬಹುದು' ಎಂಬ ಘೋಳವಾಕ್ಯದೊಂದಿಗೆ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಘಟಕದ ವತಿಯಿಂದ ಜಿಲ್ಲಾ ಆಸ್ಪತ್ರೆಯ ಡಿ.ಎನ್. ಬಿ ಹಾಲ್ ನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಜನತೆಯು ಕ್ಷಯರೋಗದ ಕುರಿತು ಹೆಚ್ಚು ಕಾಳಜಿಯನ್ನು ತೆಗೆದುಕೊಳ್ಳದೆ ಇರುವುದು ಕಂಡುಬರುತ್ತಿದ್ದು, ಈ ದಿಶೆಯಲ್ಲಿ ಸೂಕ್ತ ಜಾಗೃತಿ ನೀಡುವುದರ ಜೊತೆಗೆ ಕ್ಷಯರೋಗವನ್ನು ಸಕಾಲದಲ್ಲಿ ಗುರುತಿಸುವ ಕಾರ್ಯದೊಂದಿಗೆ ಚಿಕಿತ್ಸೆಯನ್ನು ಸಂಪೂರ್ಣಗೊಳಿಸಿ, ಕ್ಷಯಮುಕ್ತ ಬಳ್ಳಾರಿಯನ್ನು ಮಾಡುವ ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡೋಣ ಎಂದು ಹೇಳಿದರು.

ರೋಗಲಕ್ಷಣವುಳ್ಳರಿಗೆ ಹೆಚ್ಚು ಹೆಚ್ಚು ಪರೀಕ್ಷೆಗಳನ್ನು ಕೈಗೊಂಡು ರೋಗವನ್ನು ಪತ್ತೆಹಚ್ಚಿ ಪ್ರತಿ ಗ್ರಾಮ ಪಂಚಾಯತಿ ಮಟ್ಟದಿಂದ ನಗರ ಪ್ರದೇಶಗಳಲ್ಲೂ ಸಕಾಲದಲ್ಲಿ ತಪ್ಪದೇ ಪರೀಕ್ಷೆ ಮಾಡಿಸುವ ಮೂಲಕ ಕ್ಷಯ ಮುಕ್ತ, ಗ್ರಾಮ ಪಂಚಾಯತ್,ಕ್ಷಯಮುಕ್ತ ವಾರ್ಡ್ಗಳೊಂದಿಗೆ ಕ್ಷಯಮುಕ್ತ ಬಳ್ಳಾರಿ ಜಿಲ್ಲೆಯನ್ನಾಗಿ ಮಾಡಲು ಸೂಚಿಸಿದರು. ಕ್ಷಯರೋಗಕ್ಕೆ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ (ನಿಕ್ಷಯ್ ಮಿತ್ರರಾಗಿ) ದಾನಿಗಳು ಹೆಚ್ಚಿನ ರೀತಿಯಲ್ಲಿ ಪೌಷ್ಟಿಕ ಆಹಾರವನ್ನು ನೀಡಲು ಮುಂದೆಬರಬೇಕು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ.ರಮೇಶಬಾಬು, ಕಳೆದ ವರ್ಷದಲ್ಲಿ 53,708 ಜನರ ತಪಾಸಣೆ ಮಾಡುವ ಗುರಿ ಹೊಂದಿದ್ದರೂ ಸಹ 66,888 ಜನರಿಗೆ ಕಫ ಪರೀಕ್ಷೆ ಮಾಡಲಾಗಿದೆ, ಇವರಲ್ಲಿ 2747 ಜನರು ಖಚಿತ ಪಟ್ಟಿದ್ದಾರೆ. ಚಿಕಿತ್ಸೆ ಪೂರ್ಣಗೊಂಡು ಗುಣಮುಖರಾಗುವ ಪ್ರಮಾಣ ಶೇ.83 ರಷ್ಟಿದ್ದು ರಾಜ್ಯಮಟ್ಟದಲ್ಲಿ ಗಣನೀಯ ಸಾಧನೆ ಮಾಡಿದ ಜಿಲ್ಲೆಗಳಲ್ಲಿ ಬಳ್ಳಾರಿ ಒಂದಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ 55 ದಾನಿಗಳಿಂದ 1068 ಜನರಿಗೆ 3668 ಕಿಟ್ಟುಗಳನ್ನು ಎಲ್ಲ ಕ್ಷಯರೋಗಿಗಳಿಗೆ ನೀಡಲಾಗಿದೆ. ಜಿಂದಾಲ್ ಸೇರಿದಂತೆ ಬಿಕೆಜಿ ಗ್ರೂಪ್ಸ್, ಕುಮಾರಸ್ವಾಮಿ ಮೈನಿಂಗ್ಸ್, ಜೀನ ಪ್ರಾಡಕ್ಟ್ ಸೇರಿದಂತೆ ಸಮಾಜ ಸೇವಕರು, ವೈದ್ಯಾಧಿಕಾರಿಗಳು, ಇತರರು ಸಹ ಮುಂದೆ ಬಂದು ರೋಗಿಗಳಿಗೆ ಬೆಂಬಲ ನೀಡುತ್ತಿರುವುದು ನಮ್ಮ ಜಿಲ್ಲೆಯಲ್ಲಿ ರೋಗದ ಪ್ರಕರಣ ಗಣನೀಯವಾಗಿ ಕಡಿಮೆಯಾಗಲು ಸಾಧ್ಯವಾಗಿದೆ ಎಂದು ತಿಳಿಸಿದರು. ಪ್ರಸ್ತುತ ಜೆಎಸ್ಡಬ್ಲ್ಯು, ಸಿಎಸ್ಆರ್ ಮೂಲಕ ಪೌಷ್ಟಿಕ ಆಹಾರ ಕಿಟ್ಟುಗಳನ್ನು ವಿತರಿಸಲು 50 ಲಕ್ಷ ರೂಪಾಯಿಗಳಲ್ಲಿ 6000 ಕಿಟ್ಟುಗಳನ್ನು ಒದಗಿಸಿದ್ದು, ಮುಂದೆ ರೋಗ ಖಚಿತ ಪಟ್ಟಂತೆ ಎಲ್ಲರಿಗೂ ಪೌಷ್ಟಿಕ ಆಹಾರ ಕಿಟ್ ವ್ಯವಸ್ಥೆ ಮಾಡುವುದಾಗಿ ತಿಳಿಸಿದ್ದಾರೆ ಎಂದರು. ಜಿಲ್ಲಾ ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಈಗಾಗಲೇ ರೋಗವನ್ನು ತ್ವರಿತವಾಗಿ ಪತ್ತೆಹಚ್ಚಲು ಸಿಬಿನ್ಯಾಟ್ ಯಂತ್ರಗಳನ್ನು ವಿಮ್ಸ್, ಜಿಲ್ಲಾ ಆಸ್ಪತ್ರೆ ಹಾಗೂ ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಹಾಗೂ ಟ್ರುನ್ಯಾಟ್ ಮಿಳನ್ಗಳನ್ನು ಎಲ್ಲ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅನುಳ್ಠಾನ ಮಾಡಲಾಗಿದ್ದು, ರೋಗವನ್ನು ಶೀಘ್ರವಾಗಿ ಪತ್ತೆ ಹಚ್ಚಿ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ ಎಂದು ತಿಳಿಸಿದರು.ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಉತ್ತಮ ಸೇವೆ ಸಲ್ಲಿಸಿದ ವೈದ್ಯರು ಕ್ಷೇತ್ರ ಸಿಬ್ಬಂದಿ ಹಾಗೂ ಖಾಸಗಿ ಆಸ್ಪತ್ರೆಯ ವೈದ್ಯರು ಸಂಘ ಸಂಸ್ಥೆಗಳಿಗೆ ಸನ್ಮಾನಿಸಲಾಯಿತು.ಕಾರ್ಯಕ್ರಮದಲ್ಲಿ ರಾಮನಗೌಡ ಮತ್ತು ಸಂಗಡಿಗರು ಕ್ಷಯವನ್ನು ಕೊನೆಗೊಳಿಸಬಹು ಎಂಬ ಕಿರು ನಾಟಕ ಪ್ರಸ್ತುತ ಪಡಿಸಿದರು.*ಜಾಥಾ:*–ವಿಶ್ವ ಕ್ಷಯರೋಗ ದಿನಾಚರಣೆ ಅಂಗವಾಗಿ ಟಿಬಿ ಬ್ಯಾಸಿಲೈಯನ್ನು ಕಂಡು ಹಿಡಿದ ವಿಜ್ಞಾನಿ ಸರ್ ರಾಬರ್ಟ್ ಕಾಕ್ಸ್ ಅವರ ಭಾವಚಿತ್ರಕ್ಕೆ ಪುಳ್ಪ ಅರ್ಪಿಸಿ, ಸಹಿ ಅಭಿಯಾನ, ಬಲೂನ ಹಾರಿ ಬಿಡುವುದರೊಂದಿಗೆ, ಜಾಥಾ ಹಮ್ಮಿಕೊಂಡು ನಗರದ ಪ್ರಮುಖ ಬೀದಿಗಳಲ್ಲಿ ಘೋಳಣೆ ಮೂಲಕ ಜಾಗೃತಿ ಮೂಡಿಸಲಾಯಿತು. ಇದೇ ವೇಳೆ ಸೆಲ್ಫಿ ಸ್ಟ್ಯಾಂಡ್ ಮೂಲಕ ನಾವು ನಿಮ್ಮೊಂದಿಗೆ ಇದ್ದೇವೆ ಎಂಬ ಜಾಗೃತಿಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಜೆಎಸ್ ಡಬ್ಲ್ಯೂ ಹಿರಿಯ ಉಪಾಧ್ಯಕ್ಷ ಸಂಜಯ್ ಹಂಡೂರ್, ಸಿಎಸ್ಆರ್ ಮುಖ್ಯಸ್ಥ ಪೆದ್ದಣ್ಣ ಬಿಡಲ, ಭಾರತೀಯ ಯುಎಸ್ಏ ರಾಜೇಶ್, ಡಿಎಲ್ಒ" ಡಾ.ಅಬ್ದುಲ್ಲಾ, ಡಿಎಫ್ಒ" ಡಾ.ವೀರೇಂದ್ರಕುಮಾರ್, ಆರ್ಸಿಹೆಚ್ಒ" ಡಾ.ಹನುಮಂತಪ್ಪ, ಐಎಲ್ಒ ಅಧ್ಯಕ್ಷ ಡಾ.ಶ್ರೀನಿವಾಸಲು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಅರ್ಚನಾ, ಗಿರೀಶ್, ಸಣ್ಣ ಕೇಶವ, ವೀರೇಶ್, ತಾಲೂಕಾ ಆರೋಗ್ಯ ಅಧಿಕಾರಿಗಳು, ವೈದ್ಯಾಧಿಕಾರಿಗಳು, ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು, ಟಿಬಿ ವಿಭಾಗದ ಸಿಬ್ಬಂದಿ, ಟಿಬಿ ಚಾಂಪಿಯನ್ಸ್ ಉಪಸ್ಥಿತರಿದ್ದರು.

# ಮಹಿಳೆಯರು ಪ್ರತಿ ಕ್ಷೇತ್ರದಲ್ಲಿಯೂ ಸಮರ್ಥರು : ಸಂಧ್ಯಾ ಮಾದಿನೂರು



ಕೊಪ್ಪಳ: ಮಹಿಳೆ ಅಬಲೆ ಅಲ್ಲಾ, ಸಬಲೆ ಎನ್ನುವುದನ್ನು ಈಗಾಗಲೇ ನಿರೂಪಿಸಿದ್ದಾಳೆ, ಆಕೆ ಯಾವುದೇ ಸೀಮಿತ ಕ್ಷೇತ್ರದಲ್ಲಿ ಅಲ್ಲಾ, ಎಲ್ಲಾ ಕ್ಷೇತ್ರಗಳಲ್ಲಿಯೂ ಸಮರ್ಥಳು ಎಂದು ಹಿರಿಯ ನ್ಯಾಯವಾದಿ ಸಂಧ್ಯಾ ಮಾದಿನೂರು ಅವರು ಹೇಳಿದ್ದಾರೆ.

ನಗರದ ಕಿನ್ನಾಳ ರಸ್ತೆಯಲ್ಲಿರುವ ಶ್ರೀ ಶಿವಶರಣೇ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದ ಸಭಾಂಗಣ ದಲ್ಲಿ ರೆಡ್ಡಿ ಮಹಿಳಾ ಸಂಘದವರು ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಉದ್ಘಾಟಿಸಿ ಅವರು ಮಾತನಾಡಿದರು.ಮಹಿಳೆಯನ್ನು ಅನಾದಿಕಾಲದಿಂದ ಕೇವಲ ಅಡುಗೆ ಮನೆಗೆ ಸೀಮಿತ ಮಾಡಲಾಗಿತ್ತು. ಆದರೆ, ಅದರೆ, ಆಕೆ ಅವಕಾಶ ಸಿಕ್ಕಾಗಲೆಲ್ಲಾ ತನ್ನ ಶಕ್ತಿಯನ್ನು ತೋರಿಸಿದ್ದರಿಂದ ಈಗ ಎಲ್ಲ ಕ್ಷೇತ್ರಗಳಲ್ಲಿಯೂ ಅವಕಾಶ ದೊರೆಯುತ್ತಿದ್ದು, ತನ್ನ ಶಕ್ತಿಯನ್ನು ಪ್ರದರ್ಶನ ಮಾಡುತ್ತಿದ್ದಾಳೆ. ಆದರೂ ಇನ್ನು ಹೆಚ್ಚು ಹೆಚ್ಚು ಅವಕಾಶದ ಅವಶ್ಯಕತೆ ಇದೆ ಎಂದರು.ನಗರಸಭೆ ಮಾಜಿ ಅಧ್ಯಕ್ಷೆ ಶಿವಗಂಗಾ ಭೂಮಕ್ಕನವರ ಮಾತನಾಡಿ, ಮಹಿಳೆಯರು ಈಗಾಗಲೇ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದು, ಅವರನ್ನು ಸ್ಪೂರ್ತಿಯಾಗಿ ತೆಗೆದುಕೊಂಡು ಇತರ ಮಹಿಳೆಯರು ಸಾಧನೆಯತ್ತ ಹೆಜ್ಜೆ ಹಾಕಬೇಕು ಎಂದರು.ಡಾ. ಕಸ್ತೂರು ಕರಮುಡಿ ಅವರು ಪ್ರಸ್ಥಾವಿಕ ಮಾತನಾಡಿ, ಆಧುನಿಕ ಕಾಲದಲ್ಲಿ ಮಹಿಳೆಯರು ಸಬಲರಾಗಿದ್ದಾರೆ. ಶಿವಶರಣೇ ಹೇಮರಡ್ಡಿ ಮಲ್ಲಮ್ಮ ಅವರ ಆದರ್ಶದ ಬದುಕು ಇಂದಿಗೂ ಮಾದರಿಯಾಗಿದೆ ಎಂದರು. ಮಹಿಳೆಯರು ಸಂಘಟನೆಯಲ್ಲಿಯೂ ಮುಂಚೂಣಿಯಲ್ಲಿದ್ದಾರೆ. ಅವರಿಗೆ ಹೆಚ್ಚು ಹೆಚ್ಚು ಅವಕಾಶ ನೀಡುವ ಅಗತ್ಯವಿದೆ ಎಂದರು. ಸಮಾಜದ ಹಿರಿಯ ಮಹಿಳೆ ನಿರ್ಮಲಾ ಅವಾಜಿ, ಲಕ್ಷ್ಮೀ ಹಂಗನಕಟ್ಟಿ, ಸುರೇಖಾ ನಾಗರಳ್ಳಿ ಮಾತನಾಡಿದರು.

ಮಹಿಳೆಯರಿಗೆ ಕವಿತಾ ಅಳವಂಡಿ ಅವರು ವಿವಿಧ ಆಟಗನ್ನಾಡಿಸಿ, ರಂಜಿಸಿದರು. ಶರಣಮ್ಮ ಪಾಟೀಲ್, ಶ್ವೇತಾ ಹೆಬ್ಬಾಳ, ಗಂಗಮ್ಮ ತೋಟದ, ಸರೋಜಾ ಮೇಟಿ, ಜಯಶ್ರೀ ಡಂಬ್ರಳ್ಳಿ, ಸುಜಾತ, ಗೀತಾ ಡಂಬ್ರಳ್ಳಿ ಮೊದಲಾದವರು ಇದ್ದರು. ರತ್ನಾ ಕಾತರಕಿ ಅವರು ಪ್ರಾರ್ಥನಾ ಗೀತೆಯನ್ನು ಹಾಡಿದರು. ಲಕ್ಷ್ಮೀಚಂದ್ರಶೇಖರ ಅವರು ವಂದನಾರ್ಪಣೆ ಮಾಡಿದರು.

# ಎಸ್.ಎಸ್.ಕೆ.ಸಮಾಜದ 145 ನೇ ವರ್ಷದ ಕಾಮ–ರತಿ ಉತ್ಸವ



ಗದಗ : ನಗರದ ಹಳೇ ಸರಾಫ್ ಬಜಾರದ ಶ್ರೀ ಜಗದಂಬಾ ದೇವಸ್ಥಾನದ ಅವರಣದಲ್ಲಿ 145 ನೇ ವರ್ಷದ ಕಾಮ–ರತಿ ಉತ್ಸವಕ್ಕೆ ಗದಗ ಎಸ್.ಎಸ್.ಕೆ ಸಮಾಜ ಪಂಚ ಟ್ರಸ್ಟ್ ಕಮೀಟಿ ಗೌರವ ಕಾರ್ಯದರ್ಶಿ ವಿನೋದ ಶಿದ್ಲಿಂಗ ಅವರು ಚಾಲನೆ ನೀಡಿದರು.

ಹೋಳಿ ಹುಣ್ಣಿಮೆಯ ದಿನವಾದ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಎಸ್.ಎಸ್.ಕೆ.ಸಮಾಜ ತರಣು ಸಂಘದ ನೇತೃತ್ವದಲ್ಲಿ ಕಾಮ–ರತಿ ಸ್ಥಾಪಿಸಿ ಹಾಗೂ ಪೂಜಾ ವಿಧಿ–ವಿಧಾನಗಳನ್ನು ಜರುಗಿಸಲಾಯಿತು. ಪ್ರಥಮ ದಿನ ಪೂಜೆಯ ನಂತರ ತರುಣ ಸಂಘದ ಅಧ್ಯಕ್ಷ ವಿಶ್ವನಾಥ ಸೂಳಂಕಿ ಅವರು ಮಾತನಾಡಿ, ಶತಮಾನಗಳಿಂದ ಈ ಭಾಗದಲ್ಲಿ ಎಸ್.ಎಸ್.ಕೆ.ಸಮಾಜದ ವತಿಯಿಂದ ಕಾಮ–ರತಿಗಳನ್ನು ಪ್ರತಿಷ್ಠಾಪಿಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು. ನಂತರ ಎಸ್.ಎಸ್.ಕೆ.ಸಮಾಜದ ಹಿರಿಯರು ಮತ್ತು ಗಣ್ಯರು ಚರ್ಚಿಸಿ ಪ್ರತಿ ವರ್ಷದಂತೆ ಈ ವರ್ಷವು ಅತೀ ಅದ್ದೂರಿಯಿಂದ ಕಾಮ–ರತಿ ಉತ್ಸವವನ್ನು ಆಚರಿಸಲು ನಿರ್ಣಯಿಸಿದರು.

ಈ ಸಂದರ್ಭದಲ್ಲಿ ಸಮಾಜದ ಹಿರಿಯರಾದ ತುಕಾರಾಮಸಾ ರಾಯಬಾಗಿ, ತರುಣ ಸಂಘದ ಉಪಾಧ್ಯಕ್ಷ ಮಾಧು ಬದಿ, ಗೌ.ಕಾರ್ಯದರ್ಶಿ ನಾಗರಾಜ ಖೋಡೆ, ಕಾರ್ಯದರ್ಶಿ ಶ್ರೀಕಾಂತ ಬಾಕಳೆ, ಖಜಾಂಚಿ ಶ್ರೀನಿವಾಸ ಬಾಂಡಗೆ, ರಾಮಚಂದ್ರಸಾ ಶಿದ್ಲಿಂಗ, ರಾಘವೇಂದ್ರ ಬಾಂಡಗೆ, ಜಗದೀಶ ಪವಾರ, ದೇವಸ್ಥಾನದ ಅರ್ಚಕ ನಾಗರಾಜ ಪೂಜಾರಿ, ಮಹಿಳಾ ಮಂಡಳದ ಅಧ್ಯಕ್ಷರಾದ ಉಮಾಬಾಯಿ ಬೇವಿನಕಟ್ಟಿ, ಉಪಾಧ್ಯಕ್ಷರಾದ ಸ್ನೇಹಲತಾ ಕಬಾಡಿ, ಕಾರ್ಯದರ್ಶಿ ರೇಖಾ ಬೇವಿನಕಟ್ಟಿ, ನಂದಾ ಶಿದ್ಲಿಂಗ ಸೇರಿದಂತೆ ಸಮಾಜ ಬಾಂಧವರು ಉಪಸ್ಥಿತರಿದ್ದರು.